**ಸಿ.ಸಿ ನಂ.28/2015**

**ದಿನಾಂಕ 22.02.2025 ರಂದು ಸಾಕ್ಷಿಗೆ ಪ್ರಮಾಣ ಭೋಧಿಸಲಾಯಿತು.**

**ಮುಂದುವರಿದ ಪಾಟೀ ಸವಾಲುಃ ಆರೋಪಿತರ ಪರ ವಕೀಲರಿಂದ.**

ನಾನು ಬಾಡಿಗೆ ಇದ್ದ ಮನೆ ಆರ್ ಸಿ ಸಿ ಮನೆಯಾಗಿರುತ್ತದೆ. ಸದರಿ ಮನೆ ಅರಣ್ಯ ಹೋಟೇಲ್ ಮುಂಭಾಗ ಇರುತ್ತದೆ. ಸದರಿ ಮನೆ ಹಿಂದೆ ಮುಂದೆ ಮನೆ ಇರಲಿಲ್ಲ ಅಕ್ಕ ಪಕ್ಕ ಎರಡು ಮನೆಗಳು ಇದ್ದವು. ಮನೆಯ ಮುಂದೆ ರಸ್ತೆ ಇದ್ದು ಎಷ್ಟು ಅಡಿ ಎಂದು ಗೊತ್ತಿಲ್ಲ. ಸಾಮಾನ್ಯವಾಗಿ 8 ರಿಂದ 15 ಅಡಿ ರಸ್ತೆ ಇರುತ್ತದೆ ಎಂದರೆ ಗೊತ್ತಿಲ್ಲ. ಸದರಿ ರಸ್ತೆಯಲ್ಲಿ 2 ವಾಹನ ಒಟ್ಟಿಗೆ ಬರಲು ಸಾಧ್ಯವಾಗುವುದಿಲ್ಲ ಎಂದರೆ ಸರಿಯಲ್ಲ. ಅ.ದಾ. ನಂ. 221/2020 ರಂತೆ ಭಾಗಾಂಶ ಕೋರಿ ಸಲ್ಲಿರುವ ದಾವೆ ಬಾಕಿ ಇರುತ್ತದೆ ಎಂದರೆ ಸರಿ. ಅ.ದಾ. ನಂ. 36/2017 ರಂತೆ ವಿಂಗರ್ ವಾಹನದ ಬಗ್ಗೆ ಸಲ್ಲಿಸಿದ ದಾವೆ ಬಾಕಿ ಇದ್ದುದ ಸದರಿ ಪ್ರಕರಣ ಬಾಕಿ ಇರುವಾಗ ಆರೋಪಿ 1 ರವರನ್ನು ದಾವೆಯಲ್ಲಿ ಪಕ್ಷಗಾರರನ್ನಾಗಿ ಮಾಡುವಂತೆ ಕೋರಿ ಡಬ್ಲ್ಯೂ.ಪಿ 12776/2017 ರಂತೆ ಮೇಲ್ಮನವಿ ಸಲ್ಲಿಸಿದ್ದ ಅರ್ಜಿ ಪುರಸ್ಕಾರವಾಗಿರುತ್ತದೆ ಎಂದರೆ ಗೊತ್ತಿಲ್ಲ.

ಅ ದಾ ನಂ 200/2020 ಅನ್ನು ಶಾಶ್ವತ ನಿರ್ಬಂದಕಾಜ್ಞೆ ಕೋರಿ ಸಲ್ಲಿಸಿರುತ್ತೇನೆ ಎಂದರೆ ಸರಿ. ಸದರಿ ದಾವೆ ಸಹ ಬಾಕಿ ಇರುತ್ತದೆ ಎಂದರೆ ಸರಿ. ಆರೋಪಿತರು ಯಾವುದೇ ಕೊಲೆ ಬೆದರಿಕೆ ಹಾಕಿರುವುದಿಲ್ಲ ಮತ್ತು ಹೊಡೆದಿರುವುದಿಲ್ಲ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ ದಿನ ಆರೋಪಿ ತರು ಯಾರು ಮನೆ ಬಳಿ ಬಂದಿರಲಿಲ್ಲ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿತರಿಗೆ ತೊಂದರೆ ಕೊಡಲು ಸುಳ್ಳು ಪ್ರಕರಣ ದಾಖಲು ಮಾಡಿದ್ದೇನೆ ಎಂದರೆ ಸರಿಯಲ್ಲ. ಕೆ ಎಂ ಗುರುಲಿಂಗಪ್ಪ ಬಿನ್ ಲೇಟ್ ಕೆ ಎಂ ನಾಗಪ್ಪ ನನ್ನ ತಂದೆ ಎಂದರೆ ಸರಿ. ಮಂಗಳಪ್ಪ ಬಿನ್ ನಾಗಪ್ಪ ನನ್ನ ಚಿಕ್ಕಪ್ಪ. ಸದರಿಯವರು ತೆರಣಿ ಮಂಟಿ ಗ್ರಾಮದವರು ಎಂದರೆ ಸರಿ. ಗುರುಸ್ವಾಮಿ, ನಂಜುಂಡಸ್ವಾಮಿ ನಮ್ಮ ಸಂಬಂದಿಕರು ಎಂದರೆ ಸರಿ. ಆರೋಪಿತರ ವಿರುದ್ದ ದ್ವೇಷ ಸಾದಿಸಲು ಸುಳ್ಳು ಪ್ರಕರಣ ದಾಖಲು ಮಾಡಿದ್ದೇನೆ ಎಂದರೆ ಸರಿಯಲ್ಲ.

**<u>ಮರು ವಿಚಾರಣೆಃ  ಇಲ್ಲ.</u>**

(ತೆರೆದ ನ್ಯಾ. ದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಗಣಕೀಕರಣಗೊಳಿಸಲಾಯಿತು)

**2 ನೇ ಹೆಚ್ಚುವರಿ ನ್ಯಾಯಾಧೀಶರು ಮತ್ತು**
**ಪ್ರ.ದ.ನ್ಯಾ. ದಂಡಾಧಿಕಾರಿಗಳು, ಹೆಚ್.ಡಿ. ಕೋಟೆ.**